**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 603/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವಯ್ಯ @ ಬಸವರಾಜು |
| ತಂದೆಯ ಹೆಸರು | : | ಬಸವಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕಾಳೀಹುಂಡಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 06.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ತಮ್ಮ, ಚಾಸಾ-3 ನನ್ನ ತಾಯಿ ಮತ್ತು ಚಾಸಾ-4 ನನ್ನ ತಮ್ಮನ ಹೆಂಡತಿ. ಚಾಸಾ-5 ರಿಂದ ಚಾಸಾ-8 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮದವರು. ಚಾಸಾ-9 ರವರು ನಮ್ಮ ಪಕ್ಕದ ಬೀದಿಯವರು. ಚಾಸಾ-10 ನನ್ನ ಅಕ್ಕನ ಮಗ.

ದಿನಾಂಕಃ 08.05.2020 ರಂದು ರಾತ್ರಿ ಸುಮಾರು 09.00 ಗಂಟೆ ಸಮಯದಲ್ಲಿ ನನ್ನ ತಮ್ಮನಾದ ಚಾಸಾ-1 ರವರು ತನ್ನ ಹೆಂಡತಿ ಮತ್ತು ಮಕ್ಕಳ ಜೊತೆ ಮನೆಯಲ್ಲಿ ಮಲಗಿರುವಾಗ 1 ನೇ ಆರೋಪಿಯಾದ ಅರುಣ್ ಕುಮಾರ ನನ್ನ ತಮ್ಮನ ಮನೆಯ ಬಳಿ ಬಂದು ಕಿಟಕಿಯ ಹತ್ತಿರ ಇಣುಕುತ್ತಿದ್ದು, ಆಗ ಚಾಸಾ-1 ನನಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತಾರೆ. ಆಗ ನಾನು ಹಾಗು ನನ್ನ ತಾಯಿಯಾದ ಚಾಸಾ-3 ರವರು ಹೊರಗೆ ಹೋಗಿ ನೋಡಿದ್ದು, ಆಗ 1 ನೇ ಆರೋಪಿ ಅಲ್ಲಿಯೇ ಇದ್ದಿರುತ್ತಾನೆ. ಆಗ ನಾವು ಆತನನ್ನು ಇಲ್ಲಿ ಏನು ಮಾಡುತ್ತಿದ್ದಿ, ಏಕೆ ಬಂದಿದ್ದೆ ಎಂದು ಕೇಳಿದ್ದು, ಆಗ ಆತ ನಾನು ಹೀಗೆ ಬರುವುದು ನೀವೇನು ಮಾಡುತ್ತಿರಾ ಎಂದು ಗಲಾಟೆ ಮಾಡಿರುತ್ತಾನೆ.

ನಂತರ ಉಳಿದ ಆರೋಪಿಗಳು ಅಲ್ಲಿಗೆ ಬಂದು ಗಲಾಟೆ ಮಾಡಿದ್ದು, 1 ಆರೋಪಿಯು ಮಚ್ಚಿನಿಂದ ಚಾಸಾ-1 ರವರ ತಲೆಗೆ ಹಲ್ಲೆ ಮಾಡಿರುತ್ತಾನೆ. ಅಲ್ಲದೇ 8 ನೇ ಆರೋಪಿಯು ದೊಣ್ಣೆಯಿಂದ ನನ್ನ ಮೈ ಮತ್ತು ಕೈ-ಕಾಲುಗಳಿಗೆ ಹಲ್ಲೆ ಮಾಡಿರುತ್ತಾನೆ. ಅಲ್ಲದೇ 2 ನೇ ಆರೋಪಿ ನನ್ನ ಮಚ್ಚಿನಿಂದ ನನ್ನ ಮೂಗಿನ ಮಧ್ಯ ಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. ಆಗ ಊರಿನವರು ಬಂದು ಸಮಾಧಾನ ಮಾಡಿದ್ದು ಆಗ ಆರೋಪಿಗಳು ಹೋಗುವಾಗ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರತ್ತಾರೆ. ನಂತರ ಚಾಸಾ-7 ಮತ್ತು ಚಾಸಾ-8 ರವರು ನನ್ನನ್ನು, ಚಾಸಾ-1 ಮತ್ತು ಚಾಸಾ-3 ರವರನ್ನು ಹೆಚ್.ಡಿ. ಕೋಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು ಆ ಪ್ರಕಾರ ನಾವು ಮೈಸೂರಿನ ವಿದ್ಯಾರಣ್ಯ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಮರುದಿನ ಅಂದರೆ ದಿನಾಂಕಃ 09.05.2020 ರಂದು ಹೆಚ್.ಡಿ. ಕೋಟೆಯ ಪೋಲೀಸ್ ರು ಬಂದು ನಮ್ಮನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ **ಮುದ್ದೆಮಾಲು-1 ಹಾಗು ಮುದ್ದೆಮಾಲು-2 ಅನ್ನು ನೋಡಿ** ಗುರುತಿಸುತ್ತಾರೆ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಆರೋಪಿಗಳ ಪರ ವಕೀಲರು ವೈಯಕ್ತಿಕ ಸಮಸ್ಯೆ ಇರುವುದಾಗಿ ತಿಳಿಸಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**